ಕಾಯಲು ನಿರ್ಧರಿಸಿದೆ. ಈ ಮಧ್ಯೆ 2020ರಲ್ಲಿ ಲಾಕ್‌ಡೌನ್ ತೆರವಾದಾಗ ಕರ್ನಾಟಕ ಪ್ರವಾಸೋದ್ಯಮಕ್ಕಾಗಿ ಇಡೀ ರಾಜ್ಯ ಸುತ್ತಿ ಚಿತ್ರೀಕರಣ ಮಾಡಿದೆ. ಅಷ್ಟರಲ್ಲಿ ರಿಷಭ್ ಶೆಟ್ಟಿ ಅವರು ನನ್ನ ಫೋಟೊವನ್ನು ಇನ್‌ಸ್ಟಾಗ್ರಾಮ್‌ನಲ್ಲಿ ನೋಡಿ 'ಕಾಂತಾರ' ಸಿನಿಮಾದಲ್ಲಿ ನಟಿಸುವ ಅವಕಾಶ ಕೊಟ್ಟರು'' ಎನ್ನುವ ಸಪ್ತಮಿಗೆ ಇಷ್ಟು ಕಾಲ ಕಾದಿದ್ದು ಹುಸಿಹೋಗಲಿಲ್ಲ ಎಂಬ ಖುಷಿಯಿದೆ.

'ಕಾಂತಾರ' ಸಿನಿಮಾದಲ್ಲಿ ಅವರು ಹಳ್ಳಿ ಹುಡುಗಿಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಅದಕ್ಕಿಂತ ಹೆಚ್ಚಾಗಿ ಮಂಗಳೂರಿನ ಸಂಸ್ಕೃತಿ, ಸಂಪ್ರದಾಯಗಳನ್ನು ಈ ಸಿನಿಮಾದ ಮೂಲಕ ತಿಳಿದುಕೊಳ್ಳಲು ಸಾಧ್ಯವಾಗುತ್ತಿದೆ ಎಂಬ ತೃಪ್ತಿಯೂ ಅವರಿಗಿದೆ.

'ನನಗೆ ಒಂದರ ಹಿಂದೆ ಇನ್ನೊಂದು ಸಿನಿಮಾ ಮಾಡುತ್ತ ಹೋಗಬೇಕು ಎಂಬ ಅವಸರ ಇಲ್ಲ. ಕಡಿಮೆ ಸಿನಿಮಾ ಮಾಡಿದರೂ ಜನರಿಗೆ ಇಷ್ಟವಾಗುವಂಥ ಸಿನಿಮಾ ಮಾಡಬೇಕು. ಕಂಟೆಂಟ್ ಪ್ರಧಾನವಾದ ಸಿನಿಮಾದಲ್ಲಿ ನಟಿಸಬೇಕು ಎಂಬ ಆಸೆ ಇದೆ. ಕಾಂತಾರ ಸಿನಿಮಾ ನನಗೆ ಆ ಕಾರಣಕ್ಕೇ ಇಷ್ಟವಾದದ್ದು. ಈ ಸಿನಿಮಾದಿಂದ ನನಗೆ ಮಂಗಳೂರಿನ ಸಂಸ್ಕೃತಿಯನ್ನು ತಿಳಿದುಕೊಳ್ಳಲು ಸಾಧ್ಯವಾಯ್ತು. ಜನರಿಗೂ ಈ ಸಿನಿಮಾ ಮಂಗಳೂರಿನ ಸಂಸ್ಕೃತಿಯನ್ನು ಪರಿಚಯಿಸುತ್ತದೆ. ಹೀಗೆ ಜನರಿಗೆ ಏನನ್ನಾದರೂ ಹೊಸದನ್ನು ತಿಳಿಸಿಕೊಡುವ ಸಿನಿಮಾಗಳಲ್ಲಿ ನಟಿಸಬೇಕು ಎನ್ನುವುದೇ ನನ್ನ ಆಸೆ' ಎನ್ನುತ್ತಾರೆ ಅವರು.

ಈಗ ಅವರು ನಾಲ್ಕು ವರ್ಷಗಳಿಂದ ಈಜು ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿಲ್ಲ. ಹಾಗೆಂದು ಈಜಿನ ಮೇಲಿನ ಪ್ರೀತಿಯೇನೂ ಅವರಿಗೆ ಕಮ್ಮಿಯಾಗಿಲ್ಲ. 'ಈಗಲೂ ನೀರು ಕಂಡರೆ ನನಗೆ ಜಿಗಿದುಬಿಡೋಣ ಅನಿಸುತ್ತದೆ. ನೀರಿನಲ್ಲಿ ಇಳಿದರೆ ಸಿಗುವ ಖುಷಿಯೇ ಬೇರೆ. ಯಾಕೆಂದರೆ ಚಿಕ್ಕಂದಿನಿಂದಲೂ ನನಗೆ ಗೊತ್ತಿರುವ ಜಗತ್ತೇ ಅದು. ಅದರ ಮೇಲಿನ ಪ್ರೀತಿ ಯಾವತ್ತೂ ಕಡಿಮೆ ಆಗಲ್ಲ' ಎನ್ನುವ ಸಪ್ತಮಿ ಈಗ ನಟನೆಯೆಂಬ ಸಮುದ್ರದಲ್ಲಿ ಈಜಿಗಿಳಿದಿದ್ದಾರೆ. ಹೊಸತನ್ನು ಕಲಿತುಕೊಳ್ಳುವ ಉತ್ಸಾಹ, ಪ್ರಯೋಗಗಳಿಗೆ ತೆರೆದುಕೊಳ್ಳುವ ಉಮೇದು ಅವರನ್ನು ಬಹುದೂರ ಕರೆದುಕೊಂಡು ಹೋಗುವ ಸಾಧ್ಯತೆಯಂತೂ ಇದೆ.



# ಶಿವಣ್ಣ ಇನ್ನೂ ಲವರ್ ಬಾಯ್!

ಸ್ಯಾಂಡಲ್‌ವುಡ್‌ನ ಟಾಪ್ ಒನ್ ಹೀರೊ ಯಾರು? ಅತಿ ಹೆಚ್ಚು ಸಂಭಾವನೆ ಪಡೆಯುವ ನಾಯಕನಟ ಯಾರು? ಅತಿ ಹೆಚ್ಚು ತಿಳಿವಳಿಕೆ ಹೊಂದಿರುವ ಹೀರೊ ಯಾರು? ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ಭಿನ್ನ ಭಿನ್ನವಾಗಿರುತ್ತದೆ. ಆದರೆ, ಅತಿ ಹೆಚ್ಚು ಸಿನಿಮಾಗಳಲ್ಲಿ ನಟಿಸುತ್ತಿರುವ ನಾಯಕನಟ ಯಾರು? ಕಮರ್ಷಿಯಲ್ ಸೂತ್ರಕ್ಕೂ ಪ್ರಯೋಗದ ಪಾತ್ರಕ್ಕೂ ಒದಗಿಬರಬಲ್ಲ ನಿರ್ದೇಶಕರ ನಟ, ನಿರ್ಮಾಪಕರ ಭರವಸೆಯ ಹೀರೊ ಯಾರು ಎಂಬ ಪ್ರಶ್ನೆಗೆ ಬಹುಶಃ ಭಿನ್ನಾಭಿಪ್ರಾಯವಿಲ್ಲದೇ ಹೇಳಬಹುದು: ಶಿವಣ್ಣ!

ಅರವತ್ತು ವಸಂತಗಳನ್ನು ಮುಟ್ಟುತ್ತಿರುವ ಶಿವಣ್ಣನ ಕೈಲಿ ಇರುವ ಸಿನಿಮಾಗಳನ್ನು ಲೆಕ್ಕ ಹಾಕಿದರೆ ಅಚ್ಚರಿಯಾಗದೇ ಇರದು. ಬರೀ ಲೆಕ್ಕದಲ್ಲಷ್ಟೇ ಅಲ್ಲ, ವೈವಿಧ್ಯ ನೋಡಿದರೂ ಈ ಅಚ್ಚರಿ ಹೆಚ್ಚೇ ಆಗುತ್ತದೆ.

ಈಗ ಶಿವಣ್ಣ 'ನೀ ಸಿಗುವವರೆಗೂ' ಎಂದು ಗುನುಗುತ್ತಿದ್ದಾರೆ. ಅನುಮಾನ ಬೇಡ, ಇದು ಪ್ರೇಮಕಥೆಯೇ! ಪ್ರೇಮಕ್ಕೆ ವಯಸ್ಸಿನ ಹಂಗಿಲ್ಲ ಎಂದಮೇಲೆ ಪ್ರೇಮದ ಪಾತ್ರದಲ್ಲಿ ನಟಿಸುವ ನಟನಿಗೆ ವಯಸ್ಸಿನ ಹಂಗೇಕೆ? ಎಂಬ ಮಾತನ್ನು ಶಿವಣ್ಣನ ವಯಸ್ಸಿನ ಇತರ ನಟರಿಗೆ ಅನ್ವಯಿಸುವುದು ಕಷ್ಟ ಕಷ್ಟ...

'ನೀ ಸಿಗುವವರೆಗೂ' ಚಿತ್ರದಲ್ಲಿ ಅವರು ಎರಡು ರೀತಿಯ ಛಾಯೆಯುಳ್ಳ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಅವರ 'ಲವರ್ ಬಾಯ್' ಲುಕ್ ಕೂಡ ಈಗಾಗಲೇ ಸೋಷಿಯಲ್ ಮೀಡಿಯಾದಲ್ಲಿ ಸಾಕಷ್ಟು ವೈರಲ್ ಆಗುತ್ತಿದೆ. ಅಂದಹಾಗೆ, ಇದು ಶಿವಣ್ಣನ 124ನೇ ಸಿನಿಮಾ. ಈಗಾಗಲೇ ಚಿತ್ರತಂಡ ಚಿತ್ರೀಕರಣದಲ್ಲಿ ತೊಡಗಿದ್ದು, ಮೆಹ್ರಿನ್ ಪಿರ್ಝಾದಾ ನಾಯಕಿಯಾಗಿ ನಟಿಸುತ್ತಿದ್ದಾರೆ.

'ಕಣ್ಣ ಹೊಡಿಯಾಕ...' ಹಾಡಿನ ಖ್ಯಾತಿಯ ಗಾಯಕಿ ಮಂಗ್ಲಿ ಕೂಡ ಈ ಸಿನಿಮಾದಲ್ಲಿ ನಟಿಸುತ್ತಿರುವುದು ವಿಶೇಷ. ನಾಸಿರ್, ಸಂಪತ್ ಕುಮಾರ್ ಮುಂತಾದವರು ತಾರಾಗಣದಲ್ಲಿದ್ದಾರೆ. ಚರಣ್ ರಾಜ್ ಸಂಗೀತ, ಮಹೇಂದ್ರ ಸಿಂಹ ಛಾಯಾಗ್ರಹಣ ಈ ಚಿತ್ರಕ್ಕಿದೆ.